# ಆಶಾವಾದಿ ಗೆಳೆಯನಿಗೆ

ಒಂದು ಹೂವನ್ನು ಹೊಸಕಿಹಾಕಿರಬಹುದು
ಬರಲಿರುವ ವಸಂತವ ತಡೆಯಲಾರರು
ಎನ್ನುವೆಯಲ್ಲೋ ಗೆಳೆಯಾ...

ವಸಂತದ ಹೊಸ ಚಿಗುರನೆ ಚಿವುಟಿ
ವಿಜಯಮಾಲೆ ಎಂದು ಧರಿಸಿ ಕುಣಿಯಬಲ್ಲರು!
ಸಂತಸದಿ ಹಾಡುವ ಕೋಗಿಲೆಯ
ಕೊರಳನ್ನೇ ಹಿಸುಕಿ ಕೇಕೆ ಹಾಕಿ ನಗಬಲ್ಲರು!
ಬೇಡ ಗೆಳೆಯ, ನಮಗೇಕೆ ಇವರ ಸಹವಾಸ
ನಾವು ಇನ್ನಷ್ಟು ಕಾಲ ಬದುಕಬೇಕು...

ಒಡಲ ಬೆಂಕಿ ಒಳಗೊಳಗೆ ಉರಿದು
ಸುಡದಿರಲಿ ನಿನ್ನ ನಾಳೆಗಳ ಸುಖ ಸ್ವಪ್ನಗಳ
ಆಗದಿರು ನೀ ಕುಸುಮ
ಆಗಬೇಡ ನೀ ಕೋಗಿಲೆ
ನಿನಗೆ ಕಂಪು ಆಘ್ರಾಣಿಸುವ ನಾಸಿಕಗಳಿಲ್ಲ
ದನಿ ಕೇಳಿ ಆನಂದಿಸುವ ಕಿವಿಗಳಿಲ್ಲ...

ಎಂದು ಮಾಗೀತು ನೊಂದೆದೆಗಳ ಹಸಿ ಗಾಯ
ಸಾವಲ್ಲೂ ಸಿಗದೇನೋ ಸಾಂತ್ವನ
ನೀನಂತೂ ನಿರಂತರ ಆಶಾವಾದಿ...
ನಿನಗೆಂತಹ ಮರುಳೋ ಗೆಳೆಯಾ
ಒಂದು ಹೂ ಹೊಸಕಿಹಾಕಿರಬಹುದು
ಬರಲಿರುವ ವಸಂತವ ತಡೆಯಲಾರರು
ಎನ್ನುವೆಯಲ್ಲೋ...

ನಿನಗೆ ಹೇಳುವುದಾರೂ ಏನು
ಆಸೆಗಣ್ಣುಗಳಿಂದ ಕಾಯುವ ನಾನು...

• ಶ್ರುತಿ ಬಿ.ಆರ್.

